
ISSN: 2249-894X IMPACT FACTOR : 5.2331(UIF) VOLUME - 6 | ISSUE - 12 | SEPTEMBER - 2017

REVIEW OF RESEARCH

# ಪಿ. ಲಂಕೇಶ್‌ರವರ ‘ಗುಣಮುಖ’ ನಾಟಕದ ತಲಸ್ಪರ್ಶಿ ಅಧ್ಯಯನ

**ಶಿವಶರಣಪ್ಪ ಪಿ.ಎಚ್. ಕೋಡ್ಲಿ**
**ಸಂಶೋಧನಾ ವಿದ್ಯಾರ್ಥಿ, ಕನ್ನಡ ಅಧ್ಯಯನ ಸಂಸ್ಥೆ, ಗು.ವಿ. ಗುಲಬರ್ಗಾ**



ಕನ್ನಡ ಸಾಹಿತ್ಯ ಕಂಡ ಅದ್ಭುತ ನಾಟಕಕಾರರಲ್ಲೊಬ್ಬರು. ಪಿ. ಲಂಕೇಶ್‌ರವರು ಕ್ರಿ.ಶ. 1935 ಮಾರ್ಚ್ 08 ರಂದು ಶಿವಮೊಗ್ಗ ಜಿಲ್ಲೆಯ ಕೊನಗವಳ್ಳಿ ಎಂಬ ಗ್ರಾಮದಲ್ಲಿ ಜನಿಸಿದರು ಬಾಲ್ಯದಿಂದಲೇ ಚಂಚಲ ಸ್ವಭಾವದವರಾದ ಇವರು ಶಿವಮೊಗ್ಗದಲ್ಲಿ ಉನ್ನತ ಶಿಕ್ಷಣ ಮುಗಿಸಿದರು. 1959 ರಿಂದ 1962 ರವರೆಗೆ ತಾವು ಕಲಿತ ಸಹ್ಯಾದ್ರಿ ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ಆರಂಭಿಸಿದರು. ಹೀಗೆ ಬೆಂಗಳೂರಿನಲ್ಲಿ ಅಧ್ಯಾಪಕರಾಗಿ ತದ ನಂತರ ಅದಕ್ಕೆ ಶರಣು ಹೊಡೆದು 1980ರಲ್ಲಿ ಲಂಕೇಶ್ ಪತ್ರಿಕೆ ಆರಂಭಿಸಿದರು. ಈ ಪತ್ರಿಕೆ ನಾಡಿನಾದ್ಯಂತ ಗುರುತಿಸಿಕೊಂಡಿತು. ಸುಮಾರು ನಲವತ್ತಕ್ಕಿಂತ ಹೆಚ್ಚು ಕೃತಿಗಳನ್ನು ಬರೆದರು. ಬರೆದಿರುವುದು ಕಡಿಮೆ, ಪ್ರಶಸ್ತಿ ಬಂದಿರುವುದೇ ಹೆಚ್ಚು. ಇವುಗಳಲ್ಲಿ ಹತ್ತು ಮಹತ್ವದ ನಾಟಕಗಳಿವೆ. ಟಿ. ಪ್ರಸನ್ನನ ಗೃಹಸ್ಥಾಶ್ರಮ 1962, ನನ್ನ ತಂಗಿಗೊಂದು ಗಂಡು ಕೊಡಿ 1963, ಪೊಲೀಸರಿದ್ದಾರೆ ಎಚ್ಚರಿಕೆ 1964, ತೆರೆಗಳು 1964, ಕ್ರಾಂತಿ ಬಂತು ಕ್ರಾಂತಿ 1965, ಗಿಳಿಯು ಪಂಜರದೊಳಿಲ್ಲ 1966, ಸಿದ್ಧತೆ 1970, ಬಿರುಕು 1973, ಸಂಕ್ರಾಂತಿ ಮತ್ತು ಗುಣಮುಖ 1993. ಈ ಗುಣಮುಖ ನಾಟಕ ಐತಿಹಾಸಿಕ ನಾಟಕವಾದರು ಮನುಷ್ಯನ ವಾಸ್ತವ ಜೀವನದ ಮೇಲೆ ಬೆಳಕು ಚೆಲ್ಲುತ್ತದೆ. ದೆಹಲಿ ಸುಲ್ತಾನರ ಅರಾಜಕತೆ, ಪರ್ಶಿಯಾದ ಅರಸ ನಾದಿರಷಾನ ದಾಳಿ ಈ ಕಥೆಯ ಪ್ರಮುಖ ವಸ್ತುವಾಗಿದೆ.

## ಪೀಠಿಕೆ

ಪಿ. ಲಂಕೇಶರು ಗುಣಮುಖ ನಾಟಕದ ಮುನ್ನುಡಿಯಲ್ಲಿ ತಾವೇ ಹೇಳಿದ ಮಾತುಗಳಿವು **“ನಾದಿರ್‌ನ ಈ ವಿಚಿತ್ರ ದಿಗ್ವಿಜಯದ ಸೋಲಿನ ಜೀವನದಲ್ಲಿ ನನ್ನ ಮನಸೆಳೆದದ್ದು ಆತನ ಅನುಮಾನ, ನಿಷ್ಠುರತೆ ಮತ್ತು ಕಾಯಿಲೆ ಘಟನಾವಳಿಗಳು ಮತ್ತು ಮನುಷ್ಯರ ದ್ವಂದ್ವಗಳು ನಾದಿರ್‌ನನ್ನು ಪಾತಾಳಕ್ಕೆ ತಳ್ಳಿದರೂ ಆತ ಎದ್ದು ಬರುವ ರೀತಿ ಮತ್ತು ಸತ್ಯ ಹಾಗೂ ಸುಳ್ಳು ಒಬ್ಬ ಸ್ವಪ್ರತಿಷ್ಠನನ್ನು ಸ್ಪರ್ಶಿಸುವ ಬಗೆ, ಖುಷ್‌ವಂತ್ ಸಿಂಗ್ ಅವರ ‘ದೆಹಲಿ ಪುಸ್ತಕದಲ್ಲಿ ‘ಅಲಾವಿಖಾನ್’ ಎಂಬ ಹಕೀಮನ ಬಗ್ಗೆ ಒಂದೆರೆಡು ಸಣ್ಣ ಪ್ಯಾರಾ ಇವೆ. ಅದನ್ನು ಓದಿದಾಗ ನಾದಿರ್ ಬಗ್ಗೆ ಅಲ್ಲಲ್ಲಿ ಓದತೊಡಗಿದೆ. ಒಂದು ವರ್ಷ ಕಾಡುತ್ತಿದ್ದ ಈ ವಸ್ತು ಕಳೆದ ವರ್ಷ ನಾಟಕವಾಯಿತು”**[1].

## ನಾಟಕದ ತಿರುಳು

ನಾದಿರ್‌ಷಾ ಒಬ್ಬ ಸಿಡುಕು ಮತ್ತು ವಿಕೃತ ಮನಸ್ಸುಳ್ಳವನು. ಯಾರ ಮೇಲೆಯೂ ಭರವಸೆಯಾಗಲಿ ನಂಬಿಕೆಯಾಗಲಿ ಇಟ್ಟವನಲ್ಲ. ಅನುಮಾನಾಸ್ಪದವಾದ ವ್ಯಕ್ತಿತ್ವ ನಾದಿರ್‌ಷಾನದು. ಈ ಗುಣಮುಖ ನಾಟಕ ಗಾತ್ರದಲ್ಲಿ ಚಿಕ್ಕದಾದರೂ ವಸ್ತು ಧ್ಯೇಯೋದ್ದೇಶಗಳಲ್ಲಿ ಹಿರಿದು. ಸುಮಾರು ಐವತ್ತೆರೆಡು ಪುಟಗಳನ್ನೊಳಗೊಂಡ ನಾಟಕವು ಕೇವಲ ಮೂರು ದೃಶ್ಯಗಳನ್ನು ಹೊಂದಿದೆ. ದೆಹಲಿಯನ್ನು ವಶಪಡಿಸಿಕೊಂಡ ನಾದಿರ್‌ಷಾ ಅನಾರೋಗ್ಯಕ್ಕೆ ತುತ್ತಾಗುತ್ತಾನೆ. ಅವನನ್ನು ಗುಣಪಡಿಸಲು ರಾಜ ವೈದ್ಯರೆಲ್ಲ ಪ್ರಯತ್ನ ಪಟ್ಟರು ಸಾಧ್ಯವಾಗಲಾರದು. ಕೊನೆಗೆ ಅಲಾವಿಖಾನ ಎನ್ನುವ ಎಂಬತ್ತು ವರ್ಷದ ಸಿಡುಕು ಸ್ವಭಾದ ಮುದುಕ ಅವನನ್ನು ಗುಣಪಡಿಸುತ್ತಾನೆ. ನಿಜ ಜೀವನದ ಮಾರ್ಗದರ್ಶನವನ್ನು ಮಾಡುತ್ತಾನೆ. ಇದಿಷ್ಟು ಈ ನಾಟಕದ ತಿರುಳು. ಸುಮಾರು ಹತ್ತಕ್ಕಿಂತ ಹೆಚ್ಚು ಪಾತ್ರಗಳು ನಾಟಕದಲ್ಲಿ ಬರುತ್ತವೆ. ದೆಹಲಿ ಮಂತ್ರಿಗಳ ಪಿತೂರಿ, ದೆಹಲಿಯ ಸುಲ್ತಾನನಾದ ನಜಿರೋದ್ದೀನ್‌ನ ಅಸಹಾಯಕತೆ ಮತ್ತು ನಾದಿರ್‌ಷಾನ ವಿಕೃತ ಅಟ್ಟಹಾಸಗಳು ಈ ನಾಟಕದ ಇನ್ನೊಂದು ಭಾಗವಾಗಿ ಪರಿಣಮಿಸುತ್ತವೆ.

**ಐತಿಹಾಸಿಕ ಹಿನ್ನೆಲೆ**

ಗುಣಮುಖ ನಾಟಕದ ಐತಿಹಾಸಿಕ ಹಿನ್ನೆಲೆಯನ್ನು ಕೆದಕುತ್ತಾ ಹೋದರೆ ಈ ನಾಟಕದಲ್ಲಿ ಬರುವ ನಾದಿರ್‌ಷಾನ ಕಥೆಗೂ ಮತ್ತು ಇತಿಹಾಸಕ್ಕೂ ಒಂದು ಬಗೆಯ ನಂಟಿದೆ. ಲಂಕೇಶರು ಇತಿಹಾಸವನ್ನು ಆಧಾರವಾಗಿಟ್ಟುಕೊಂಡು ನಾಟಕ ಬರೆದಿರುವುದಾಗಿ ಹೇಳಿದ್ದಾರೆ. ಆದರೆ ಇಲ್ಲಿ ಬರುವ ಅಂಕಿ ಅಂಶಗಳಿಗೂ ಮತ್ತು ಇತಿಹಾಸದ ಅಂಕಿ ಅಂಶಗಳಿಗೂ ಅಲ್ಪ ವ್ಯತ್ಯಾಸಗಳಿವೆ. ಪಿ. ಲಂಕೇಶ್‌ರವರು ಗುಣಮುಖ ಟಿಪ್ಪಣಿಯಲ್ಲಿ ಹೇಳಿರುವಂತೆ **"1739ರಲ್ಲಿ ಹಿಂದೂಸ್ಥಾನಕ್ಕೆ ಹೊರಟು 1740ರ ವಸಂತದಲ್ಲಿ ಮೊಘಲ್ ಸೈನ್ಯವನ್ನು ಕರ್ನೂಲ್‌ನಲ್ಲಿ ಧ್ವಂಸಮಾಡಿದ..... ನಾದಿರ್ 1740ರಲ್ಲಿ ಭಾರತದ ಮೇಲೆ ಅಪ್ಪಳಿಸಿದಾಗ ಮೊಘಲ್ ಮನೆತನ ಶ್ರೀಮಂತವಾಗಿತ್ತು"**[2] ಎಂದು ಹೇಳುತ್ತಾರೆ. ಪಿ. ಲಂಕೇಶ್‌ರವರು ಪಾತ್ರಗಳ ಹೆಸರುಗಳಲ್ಲಿ ಅಲ್ಪ ಬದಲಾವಣೆಗಳನ್ನು ಮಾಡಿದ್ದಾರೆ. ಗುಣಮುಖ ನಾಟಕದಲ್ಲಿ ಮೊಘಲ್ ದೊರೆ ನಜಿರುದ್ದೀನ್ ಷಾ ಎಂದು ಹೇಳಿದ್ದಾರೆ. ಆದರೆ **"ನಾದಿರ್‌ಷಾನು ದೆಹಲಿಗೆ ಕೆಲವೇ ಮೈಲುಗಳ ದೂರಕ್ಕೆ ಬಂದನು ಅಲ್ಲಿಯವರೆಗೆ ಸುಮ್ಮನಿದ್ದ ಮೊಘಲ್ ಅರಸ ಮಹಮದ್‌ಷಾನು ವೈರಿಯನ್ನು ಎದುರಿಸಲು ತನ್ನ 75,000 ಸಾವಿರ ಸೈನಿಕರೊಡನೆ ಕರ್ನೂಲ್ ತಲುಪಿದನು"**[4] ಎಂದು ಇತಿಹಾಸಕಾರರು ಆಧಾರ ಸಹಿತ ನಿರೂಪಿಸುತ್ತಾರೆ. ಈ ನಾಟಕದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸಗಳನ್ನು ಬಿಟ್ಟರೆ ಉಳಿದೆಲ್ಲವುಗಳು ನಿಜ ಘಟನೆಗಳ ಆಧಾರದ ಮೇಲೆ ನಾಟಕದ ಕಥನ ಕ್ರಿಯೆ ಕಟ್ಟಿಕೊಳ್ಳುತ್ತದೆ.

**ತಲಸ್ಪರ್ಶಿ ಅಧ್ಯಯನ**

ನಾಟಕ ಇತಿಹಾಸದ ಕಥೆಗಳನ್ನು ಒಳಗೊಂಡಿದ್ದರು ಮನುಷ್ಯ ಬದುಕಿನ ಮೂಲ ಸೆಲೆಯನ್ನು ನಿರೂಪಿಸುವಲ್ಲಿ ಯಶಸ್ವಿಯಾಗುತ್ತದೆ. ಮನುಷ್ಯನ ಹಪಾಪಿತನ, ಅಧಿಕಾರದ ದಾಹ, ಹಣದ ಹುಚ್ಚು ಏಕಾಂಗಿತನ, ರೋಗ ರುಜಿನಗಳು, ಸಂಶಯ ಕ್ರೂರತನ ಈ ಎಲ್ಲಾ ಅಂಶಗಳು ನಾದಿರ್‌ಷಾನನ್ನು ಕಾಡಿ, ಅವನನ್ನು ಕಾಡಿ ಇನ್ನಷ್ಟು ಕ್ರೂರಿಯನ್ನಾಗಿ ಮಾಡುತ್ತವೆ.

ಯುದ್ಧದ ತಂತ್ರ ಮತ್ತು ಕಾರ್ಯಾಚರಣೆಯಲ್ಲಿ ನಿಷ್ಣಾತನಾಗಿದ್ದ ನಾದಿರ್ ಯುದ್ಧ ತರುತ್ತಿದ್ದ ಸುಖ ಮತ್ತು ಸಂಪತ್ತಿಗಿಂತ, ಹೆಚ್ಚಾಗಿ ಯುದ್ಧದ ಕ್ರೌರ್ಯದಿಂದ ರೋಮಾಂಚನಗೊಳ್ಳುತ್ತಿದ್ದ. ಆಡಳಿತ ಮತ್ತು ಪ್ರಜೆಗಳ ನೆಮ್ಮದಿಯ ಬಗೆ ಎಂದೂ ಗಮನಕೊಡಷ್ಟು ತಾಳ್ಮೆಗೆಟ್ಟ ನಾದಿರ್ ಮನುಷ್ಯನ ಸೊಗಲಾಡಿತನ ಸುಳ್ಳು ಮತ್ತು ಮೋಸ ಕಂಡು ಬೆಂಕಿಯಾಗುತ್ತಿದ್ದ. ಮೊಘಲ್ ಆಸ್ಥಾನದ ಸಂಪತ್ತು ಮತ್ತು ಅರಾಜಕತೆ ಕಂಡು ಕ್ಷಣ ಇಲ್ಲಿ ಇದ್ದು ಬಿಡಲು ಯೋಚಿಸಿದ. ಪರ್ಶಿಯಾಕ್ಕೆ ಹಿಂದಿರುಗುವ ಆಸೆ ಮತ್ತು ಇಲ್ಲಿ ತಂಗುವ ಚಪಲ, ತನ್ನ ವೀರ್ಯವತ್ತಾದ ಪಡೆ ಮತ್ತು ಇಲ್ಲಿಯ ನಿರ್ವೀರ್ಯ ಕುತಂತ್ರ ಕಂಡು ತನ್ನ ಖಡ್ಗದ ಮೂಲಕ ಅಸ್ತಿತ್ವ ಕಂಡುಕೊಳ್ಳುತ್ತ ದೈಹಿಕವಾಗಿ, ಮಾನಸಿಕವಾಗಿ ಅಸ್ವಸ್ಥನಾದ, ದೆಹಲಿಯನ್ನು ವಶಪಡಿಸಿಕೊಂಡ ನಾದಿರ್‌ನು ಇಲ್ಲಿನ ಪಿತೂರಿಗಳು, ಸುಳ್ಳು ಆರೋಪಗಳು, ವಂಚನೆ, ಕಪಟ, ಮೋಸದಿಂದ ಬೆಚ್ಚಿ ಬಿದ್ದನು. ನಾದಿರ್‌ಶಾನಿಗೆ ದೆಹಲಿಯ ಸುಲ್ತಾನರ ನಜ್ಜಿರೂದ್ದಿನ್‌ಷಾನ ಮಂತ್ರಿಗಳಾದ ನಾದಿರ್‌ಷಾ ಹಾಗೂ ಮುಲ್ಕ್‌ರು ಕಳ್ಳಪತ್ರವನ್ನು ಬರೆದು ದೆಹಲಿಯನ್ನು ವಶಪಡಿಸಿಕೊಳ್ಳಲು ತಿಳಿಸಿರುತ್ತಾರೆ. ನಾದಿರ್‌ಷಾನಿಗೆ 'ತನ್ನ ದೊರೆಯನ್ನೆ ಮೋಸ ಮಾಡಿದ ಇವರು ನನ್ನನ್ನು ಮೋಸ ಮಾಡುತ್ತಾರೆ ಎಂಬ ಭೀತಿ ಇತನನ್ನು ಕಾಡುತ್ತದೆ. ಸಾದತ್‌ನನ್ನು ಕುರಿತು, **"ನೀನು ಬರೆದ ಪತ್ರ ನಮಗೆ ಬಂದು ತಲುಪಿತು. ಹಾಗಿದ್ದರೆ ನೀನು ಮತ್ತು ನಿಜಾಮ್ ಉಲ್-ಮುಲ್ಕ್ ನಮಗೆ ಬರೆದ ಕಾಗದದ ಉದ್ದೇಶವೇನು? ಯಾವ ಕಾಗದ ಎಂದು ಹೇಳಬೇಕೆ? ನೀವು ಹಿಂದೂಸ್ತಾನಕ್ಕೆ ಬಂದು ಧರ್ಮರಕ್ಷಣೆ ಮಾಡಬೇಕು, ಇದಕ್ಕೆ ನಮ್ಮಿಬ್ಬರ ಬೆಂಬಲವಿದೆ – ಎಂದು ಬರೆದ ಕಾಗದ ಪರೋಕ್ಷವಾಗಿ ನಿಮ್ಮ ದೊರೆಯನ್ನು ಕೆಳಗಿಳಿಸಲು ಬನ್ನಿ ಎಂದು ಆಹ್ವಾನಿಸಿದ ಕಾಗದ,**

**ಸಾದತ್** :(ನಕ್ಕು) **ಎಂಥ ಮಹಾನ್ ಜ್ಞಾಪಕಶಕ್ತಿ ತಮ್ಮದು, ನನಗೇ ನೆನಪಾಗುತ್ತಿಲ್ಲ ಬರೆದದ್ದು ನಿಜವೇ ಎಂದು ಇಟ್ಟುಕೊಂಡರೂ ಅದಾದ ಮೇಲೆ ಯಮುನಾ ನದಿಯಲ್ಲಿ ಅಪಾರ ನೀರು ಹರಿದಿದೆ"**[5] ಎಂದು ಹೇಳುತ್ತಾ ತನಗೆ ಆ ವಿಷಯ ನೆನಪಾಗುತ್ತಿಲ್ಲ ಎನ್ನುವಂತೆ ನಟಿಸುತ್ತಾನೆ. ನಾದಿರ್‌ಷಾ ಮಾತನಾಡುತ್ತಾನೆ

**"ನಾದಿರ್** : **ಎಲ್ಲಾಕ್ಕಿಷ್ಟ ನಿನ್ನ ದೊರೆಗೇ ನೀನು ಮೋಸ ಮಾಡುವುದಕ್ಕೆ ಪರ್ಶಿಯಾದಲ್ಲಿ ನಾವು ಹೇಳುತ್ತೇವೆ, ದ್ರೋಹ ನೀನಿಲ್ಲಿ ಹೇಳುತ್ತಿ ಸಾಮಾನ್ಯ ಕಾರ್ಯಕರ್ತನ ಕರ್ತವ್ಯ**.

**ಸಾದತ್** : **ರಾಜತಂತ್ರ ಇಲ್ಲಿ ಜಟಿಲವಾಗಿ ಬೆಳೆದಿದೆ ಪ್ರಭು ಇಲ್ಲಿಯ ಜನ ಹೇಳುತ್ತಾರೆ, ಒಂದು ಮದುವೆ ಮಾಡಲು ಸಾವಿರ ಸುಳ್ಳು ಹೇಳಬಹುದು. ಒಬ್ಬ ದೊರೆಯನ್ನು ಕಾಪಾಡಲು ನೂರಾರು ತಂತ್ರ ಹೂಡಬಹುದು"**[6] ಸಾದತ್ ಖಾನ್‌ನು ನಿಜವಾದ ಹಳ್ಳಿಗಳ ವಾಸ್ತವದ ಪರಿಸ್ಥಿತಿಯಾಗಿದೆ. ಆದರೆ ಈ ಮಾತಿನಿಂದ ಸಿಟ್ಟಿಗೆದ್ದ ನಾದಿರ್‌ಷಾ ಹತ್ತಿರ ಕರೆದು ಅವನನ್ನು ಬಲವಾಗಿ ಎದೆಗೆ ಗುದ್ದುತ್ತಾನೆ. ನೆಲಕ್ಕುರುಳಿದ ಸಾದತ್ ಖಾನ್ ರಕ್ತಕಾರುತ್ತಾನೆ. ನಾದಿರ್‌ಷಾನೆ ದೆಹಲಿಯ ಆಕ್ರಮಣ ಮಾಡಿದ್ದರಿಂದ ಈತನಿಗೆ ಪ್ರಶ್ನೆಮಾಡುವವರು ಯಾರು? ಸಾದತ್‌ಖಾನ್ ಈತನ ಪೆಟ್ಟಿನಿಂದ ಸಾಯುತ್ತಾನೆ. ನಾದಿರ್‌ಷಾನಿಗೆ ಇಷ್ಟಾದರೂ ಹಣದ ಹೆಣದ ದಾಹ ತಿರುವುದಿಲ್ಲ. ಕೊಹಿನೂರು ಸಿಂಹಾಸನ ಮತ್ತು ನಾಲ್ಕು ಕೋಟಿ ಪಡೆಯುವುದು ಇವನ ಮುಖ್ಯಗುರಿಯಾಗಿತ್ತು.

ನಾದಿರ್‌ಷಾ ದೂತರಿಂದ ಮುಲ್ಕ್‌ನನ್ನು ಕರೆಯಲು ಕಳುಹಿಸುತ್ತಾನೆ. ನಿಜಾಮ್-ಉಲ್-ಮುಲ್ಕ್ ತನಗೆ ಕರೆಯಲು ಕಳುಹಿಸಿದ ಸುದ್ದಿ ತಿಳಿದು ಗಾಬರಿಯಾಗುತ್ತಾನೆ. ಈಗಾಗಲೆ ಸಾದತ್ ಪೆಟ್ಟು ತಿಂದು ಸತ್ತಿರುವ ಸುದ್ದಿ ಬಂದು ಮುಟ್ಟಿ ಚಿಂತಾಕ್ರಾಂತನಾಗಿದ್ದಾನೆ. ತನ್ನ ಜೊತೆಗಾರ ಹಮೀದನ ಕುಳಿತು ಮದ್ಯಪಾನ ಮಾಡುತ್ತಾ, ನಾದಿರ್‌ಷಾನನ್ನು ತೆಗಳುತ್ತಾನೆ. ಅಫಜಲ್ ಮತ್ತು ಹಮೀದ್‌ರನ್ನು ಕುರಿತು **"ಮುಲ್ಕ್: ಇಬ್ರೂ ಕೇಳಿ ಹುಚ್ಚ ನಾದಿರ್‌ಷಾ ನನಗಾಗಿ ಯಾವ ಗಳಿಗೆಯಲ್ಲಾದರೂ ಹೇಳಿಕಳುಹಿಸಬಹುದು"**[7] ಹತಾಶನಾಗಿ ಕುಡಿಯುತ್ತಾನೆ. ನಾದಿರ್‌ಷಾ ಒಬ್ಬ ದೂತನ ಮುಖಾಂತರ ಮುಲ್ಕ್‌ರನ್ನು ಕರೆಯಲು ಕಳುಹಿಸುತ್ತಾರೆ.

ಮುಲ್ಕ್‌ರಲ್ಲಿ ನಾವು ಕಪಟ ಮತ್ತು ಪಿತೂರಿಯನ್ನು ಕಾಣುತ್ತೇವೆ. ಸಾದತ್‌ನ ಜೊತೆಗೂಡಿ ಮುಲ್ಕ್ ಪಿತೂರಿ ಮಾಡುತ್ತಾನೆ. ಆದರೆ ನಾದಿರ್‌ಷಾ ದೆಹಲಿ ವಶಪಡಿಸಿಕೊಂಡ ನಂತರ ತನ್ನ ವಿರುದ್ಧವೂ ಪಿತೂರಿ ಮಾಡುತ್ತಾರೆ ಎನ್ನುವ ಭಯ ಆತನನ್ನು ಕಾಡುತ್ತದೆ, ಇವರನ್ನು ಮುಗಿಸಬೇಕು (ಕೊಲೆ) ಎನ್ನುವ ನಿಶ್ಚಯ ಮಾಡುತ್ತಾನೆ. ಆದರೆ ಮುಲ್ಕ್ ಮೊಘಲ್ ದೊರೆಯ ಜೊತೆಗೂಡಿ ಮತ್ತೊಂದು ಪಿತೂರಿಯನ್ನು

ಮಾಡುತ್ತಾನೆ. ಏಕೆಂದರೆ ತಾನೂ ನಾದಿರ್‌ಷಾನ ಕೈಯಿಂದ ಸಾಯುವುದು ಖಚಿತವಾದಾಗ ಈ ಪಿತೂರಿಗೆ ಸಂಚುಹೂಡುತ್ತಾನೆ. ನಾದಿರ್‌ಷಾ ರೋಗಗ್ರಸ್ಥನಾಗಿರುತ್ತಾನೆ. ಆತನಿಗೆ ಒಳ್ಳೆಯ ಅವಶ್ಯಕತೆ ಇರುತ್ತದೆ. ಹಕೀಮನ ಹುಡುಕಾಟ ನಡೆದಿರುತ್ತದೆ.

ಆ ಸಂದರ್ಭ ಉಪಯೋಗಿಸಿಕೊಂಡು **"ಮುಲ್ಕ್ ಏನು ಶ್ರೇಷ್ಠ ಹಕೀಮ? ಅವನು ವೈದ್ಯಕೀಯ ಬಿಟ್ಟು ಇಪ್ಪತ್ತು ವರ್ಷವಾಯಿತು. ನಮ್ಮ ಸರ್ಕಾರಿ ವೈದ್ಯರಿಗೆ ಅವನ ತಲೆಕಂಡರಾಗೋಲ್ಲ ನನ್ನನ್ನು ಕೇಳಿದ್ದರೆ ನಾನು ಬಲ್ಲ ಅತ್ಯುತ್ತಮ ಸರ್ಕಾರಿ ವೈದ್ಯರನ್ನು ಕೊಡ್ತಿದ್ದೆ ಅವನು ಹಕೀಮ ಶಂಷುದ್ದೀನ್ ಖಾನ್. ದಿಲ್ಲಿಯ ಉನ್ನತ ವೈದ್ಯ ಮೊಘಲ್ ದೊರೆಗೆ ಯಾವುದು ಇಷ್ಟ ಯಾವುದು ಇಷ್ಟ, ಯಾವುದು ಇಷ್ಟವಿಲ್ಲ ಅಂತ ಅರಿತವನು, ಪರಿಸ್ಥಿತಿಯನ್ನು ಅರ್ಥಮಾಡಿಕೊಂಡಿರುವವನು.**

**ನಜಿರುದ್ದೀನ್: ನಮ್ಮ ಕೊನೆಯ ಪ್ರಯತ್ನಕ್ಕೂ ಕಲ್ಲು ಹಾಕಬೇಡಿ, ನಮ್ಮ ಕಷ್ಟವನ್ನರಿತ ವೈದ್ಯ ಮಾತ್ರ ನಾದಿರ್‌ಶಾನ ಉಪಟಳದಿಂದ ನಮ್ಮನ್ನು ಉಳಿಸಬಲ್ಲ. ನಾದಿರ್‌ಶ ಈಗ ಕೇವಲ ರೋಗಿಯಲ್ಲ, ಸನ್ನಿಪಾತ ಹಿಡಿದ ಹುಚ್ಚ, ಆತನನ್ನು ಮುಗಿಸಬೇಕು"**[8] ನಿಮ್ಮ ಈ ತಂತ್ರ ನಮಗೆ ಇಷ್ಟವಾಗುತ್ತಿಲ್ಲ ಎಂದು ನಜಿರುದ್ದೀನ್ ಷಾ ಹೇಳುತ್ತಾನೆ. ನಾದಿರಷಾನ ಊಹೆ ನಿಜವಾಗುತ್ತದೆ. ಕೊನೆಗೆ ಮುಲ್ಕ್‌ನನ್ನು ಕೊಲೆಮಾಡುತ್ತಾನೆ. ತನಗೆ ಔಷಧಿಯ ನೆಪದಲ್ಲಿ ವಿಷ ಹಾಕಲು ಹಿಂಜರಿಯಲಾರರು ಎನ್ನುವುದು ಮನಗಂಡ ನಾದಿರಷಾ ತುಂಬಾ ಎಚ್ಚರವಹಿಸಿ ಹಕೀಮ ಅಲಾಖಿಖಾನನನ್ನು ನೇಮಿಸಿಕೊಳ್ಳುತ್ತಾನೆ.

ಅಲಾಖಿಖಾನನಿಂದ ಗುಣಮುಖನಾದ ನಾದಿರಷಾ ಆತನನ್ನು ತನ್ನ ಗುರುವೆಂದು ಭಾವಿಸಿಕೊಳ್ಳುತ್ತಾನೆ. ಅಲಾಖಿಖಾನನಿಂದಲೇ ಜೀವನದ ಸಾರ್ಥಕತೆಯನ್ನು ಕಂಡುಕೊಳ್ಳುತ್ತಾನೆ. ಅಲಾಖಿಖಾನ ನಾದಿರಷಾನಿಗೆ ಒಂದು ಮಾತು ಹೇಳುತ್ತಾನೆ **"ನೀನು ಈ ಜಗತ್ತಿನಲ್ಲಿ ಕಳೆದಿರುವ ಐವತ್ತು ವರ್ಷಗಳ ಅಹಂಕಾರ ಸ್ವಪ್ರತಿಷ್ಠೆಯ ಇನ್ನೊಂದು ಮುಖವನ್ನು ಅರ್ಥಮಾಡಿಕೊ ಇಲ್ಲಿ ಯಾವುದು ಮುಖ್ಯ? ಇಲ್ಲಿ ಯಾವುದರಿಂದ ದೇಹ ಚೈತನ್ಯ ಪಡೆಯುತ್ತದೆ? ಯಾವುದರಿಂದ ಆತಂಕ ಇಲ್ಲವಾಗುತ್ತದೆ"**[9] ಎಂದು ಪ್ರಶ್ನೆ ಮಾಡಿ ಕೊನೆಗೆ ಸೃಷ್ಟಿ ಕ್ರಿಯೆ ನಿಜಸ್ವರೂಪವನ್ನು ಅರ್ಥಮಾಡಿಸುತ್ತಾನೆ.

ಒಟ್ಟಂದ ನಾಟಕ ಆಕ್ರಮಣಕಾರಿ ನಿಲುವನ್ನು ಅನುಸರಿಸಿದರು ನಾದಿರಷಾ ತನ್ನ ರೋಗದಿಂದ ಬಳಲಿ ಬೆಂಡಾದನು. ಕೊನೆಗೆ ಹಕೀಮ ಅಲಾಖಿಖಾನನಿಂದ ಜೀವನದ ನಿಜ ಸಾರ್ಥಕತೆಯನ್ನು ಪಡೆಯುತ್ತಾನೆ. ಹಿಂದೂಸ್ಥಾನವನನು ಬಿಟ್ಟು ಹೋಗುವಾಗ ಶಾಂತಸ್ವಭಾವದವನಾಗಿ ಕ್ರೂರತನವನ್ನು ಬಿಟ್ಟು ಒಳ್ಳೆಯ ಮನುಷ್ಯನಾಗಿ, ನಜಿರುದ್ದೀನ್‌ಷಾನನ್ನೆ ದೆಹಲಿಯ ಚಕ್ರವರ್ತಿ ಎಂದು ಘೋಷಿಸುತ್ತಾನೆ. ಈ ರೀತಿ ನಾಟಕ ಸತ್ಯ, ಶಿಲ, ಸನ್ನಡತೆಯಿಂದ ನಡೆಯಲು ಪ್ರೇಕ್ಷಕರಿಗೆ, ಸಹೃದಯರಿಗೆ ತಿಳುವಳಿಕೆ ನೀಡುವಲ್ಲಿ ಯಶಸ್ವಿಯಾಗುತ್ತದೆ.

**ಅಡಿಟಿಪ್ಪಣಿಗಳು :**

1. ಲಂಕೇಶ ಪಿ. : ಗುಣಮುಖ . ಪು–ಗುಣಮುಖ ಒಂದು ಟಿಪ್ಪಣಿ.
2. ಲಂಕೇಶ ಪಿ. : ಗುಣಮುಖ . ಪು–ಗುಣಮುಖ ಒಂದು ಟಿಪ್ಪಣಿ.
3. ಸದಾಶಿವ ಕೆ. : ಸಮಗ್ರ ಭಾರತದ ಇತಿಹಾಸ.ಪು– 379.
4. ಸದಾಶಿವ ಕೆ. : ಸಮಗ್ರ ಭಾರತದ ಇತಿಹಾಸ.ಪು– 379.
5. ಲಂಕೇಶ ಪಿ. : ಗುಣಮುಖ . ಪು– 8–9.
6. ಲಂಕೇಶ ಪಿ. : ಗುಣಮುಖ . ಪು– 9.
7. ಲಂಕೇಶ ಪಿ. : ಗುಣಮುಖ . ಪು– 18.
8. ಲಂಕೇಶ ಪಿ. : ಗುಣಮುಖ . ಪು– 26.
9. ಲಂಕೇಶ ಪಿ. : ಗುಣಮುಖ . ಪು– 49.